

ಅರುಣ ಪಿ. ಭಟ್ಟ

## ವಾರಭವಿಷ್ಯ: 17.09.2020ದಿಂದ 23.09.2020ರವರೆಗೆ




ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ಆದಾಯದಲ್ಲಿನ ಹೆಚ್ಚಳ ಖರ್ಚನ್ನು ಸರಿದೂಗಿಸುತ್ತದೆ. ನಿಮ್ಮ ಅಭಿಪ್ರಾಯಗಳನ್ನು ಇತರರ ಮೇಲೆ ಹೇರಬೇಡಿ. ಮನೆಯಲ್ಲಿ ಸಾಮರಸ್ಯ ತರಲು ಯತ್ನಿಸಿ. ನಿಮ್ಮ ಸ್ಪರ್ಧಾತ್ಮಕ ಸ್ವಭಾವ ನೀವು ಸದಾ ಮುಂದೆ ಉಳಿಯಲು ಸಹಾಯ ಮಾಡುತ್ತದೆ. ವಿರೋಧಿಗಳಿಂದ ದೂರವಿರಲು ಪ್ರಯತ್ನಿಸಿ. ಶುಭದಿನ 20. ಶ್ರೀ ದುರ್ಗಾ ಆರಾಧನೆ ಮಾಡಿರಿ.




ವಾರದ ಶುರುವಿನಿಂದಲೇ ವೃತ್ತಿಯಲ್ಲಿ ಉತ್ತಮ ಅವಕಾಶಗಳು ದೊರೆಯಲಿವೆ. ಮಕ್ಕಳಿಗೆ ಸಹಾಯ ಮಾಡಲಿದ್ದೀರಿ. ಕುಟುಂಬದಲ್ಲಿ ಹಲವು ಬದಲಾವಣೆ ತರುವ ಮೂಲಕ ಸಂತೋಷ ಉಂಟು ಮಾಡಲಿದ್ದೀರಿ. ಉದ್ಯೋಗ ಸ್ಥಳದಲ್ಲಿ ಹೆಚ್ಚು ತಾಳ್ಮೆಯಿಂದ ಹಾಗೂ ಗಮನ ಕೊಟ್ಟು ಕೆಲಸ ಮಾಡಿ. ಇಲ್ಲದಿದ್ದರೆ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಶುಭದಿನ 22. ಹನುಮಾನ್ ಚಾಲೀಸ್ ಓದಿರಿ.




ದಾನ ಧರ್ಮ ಕಾರ್ಯಗಳಲ್ಲಿ ಆಸಕ್ತಿ ಮೂಡುತ್ತದೆ. ನಿಮ್ಮ ತಾಯಿಯವರ ಅನಾರೋಗ್ಯ ಆತಂಕಕ್ಕೆ ಗುರಿ ಮಾಡಬಹುದು. ಉತ್ತಮ ವರಮಾನ ಇರುತ್ತದೆ. ನಿಮ್ಮ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ನಿಮ್ಮ ಜೀವನಶೈಲಿ ಮತ್ತಷ್ಟು ಉತ್ತಮಗೊಳ್ಳುತ್ತದೆ. ಬಹಳ ಕಾಲದಿಂದ ನೀವು ಖರೀದಿ ಮಾಡಬೇಕು ಎಂದಿದ್ದ ವಸ್ತುವೊಂದರ ಖರೀದಿ ಮಾಡುತ್ತೀರಿ. ಶುಭದಿನ 21. ಗಣಪತಿಗೆ 108 ದೂರ್ವಾರ್ಚನೆ ಮಾಡಿರಿ.




ನಿಮ್ಮ ಸಾಮರ್ಥ್ಯವನ್ನು ಸರಿಯಾದ ದಿಕ್ಕಿನಲ್ಲಿ ಬಳಕೆ ಮಾಡಿಕೊಳ್ಳುತ್ತೀರಿ. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಗಳಿವೆ. ಕುಟುಂಬದ ಸದಸ್ಯರ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ಸೋದರರ ಜತೆಗೆ ಅತಿ ಮುಖ್ಯವಾದ ವಿಚಾರಗಳನ್ನು ಚರ್ಚೆ ಮಾಡುತ್ತೀರಿ. ಇದರಿಂದ ಅವರ ಪ್ರಗತಿಗೆ ಅನುಕೂಲ ಆಗುತ್ತದೆ. ವಾರದ ಕೊನೆ ಭಾಗದಲ್ಲಿ ಕೆಲಸದಲ್ಲಿ ಪ್ರಗತಿ ಇದೆ. ಶುಭದಿನ 23. ವಿಷ್ಣು ಸಹಸ್ರನಾಮ ಓದಿರಿ.




ವಾರದ ಮೊದಲ ಭಾಗದಲ್ಲಿ ದೂರದ ಪ್ರದೇಶಗಳಿಗೆ ತೆರಳುವ ಸಂಭವ. ಭೂಮಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ನಿವಾರಿಸಿಕೊಳ್ಳುವ ನಿಟ್ಟಿನಲ್ಲಿ ಹೆಚ್ಚು ಶ್ರಮ ಪಡಬೇಕಾಗುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಆಲೋಚನೆ ಮಾಡುತ್ತೀರಿ. ಈ ಮಧ್ಯೆ ನಿಮ್ಮ ವೈಯಕ್ತಿಕ ಸಂಬಂಧದಲ್ಲಿ ಕೆಲ ಗೊಂದಲ ಏರ್ಪಡುತ್ತದೆ. ಶುಭದಿನ 22 ಕಾಲಭೈರವನ ಸೇವೆ ಮಾಡಿರಿ.




ನಿಮ್ಮ ಸಂಬಂಧಿಕರನ್ನು ಭೇಟಿ ಮಾಡುವ ಸಾಧ್ಯತೆ ಇದೆ. ಹೆಚ್ಚಿನ ಖರ್ಚು ಆಗಲಿದೆ. ಉದ್ಯೋಗದಲ್ಲಿ ಒತ್ತಡ ಹೆಚ್ಚಾಗುವ ಸಾಧ್ಯತೆಯಿದೆ. ಕುಟುಂಬದ ಶುಭಕಾರ್ಯ ನಿರ್ಧಾರಕ್ಕೆ ಪೂರಕವಾಗಿ ಹಲವು ಅವಕಾಶಗಳು ದೊರೆಯಲಿವೆ. ಭೂಮಿ ಖರೀದಿಗೆ ಮನಸ್ಸು ಮಾಡುತ್ತೀರಿ. ವ್ಯವಹಾರದಲ್ಲಿ ಆತುರ ಮಾಡಿದೆ ಯೋಚಿಸಿ ನಿರ್ಣಯಿಸಿ. ಶುಭದಿನ 20. ದೇವ್ಯಪರಾಧ ಕ್ಷಮಾಪನಾ ಸ್ತೋತ್ರ 18 ಸಾರೆ ಪಠಣ ಮಾಡಿರಿ.




ವೃತ್ತಿ ಜೀವನದಲ್ಲಿ ಉತ್ತಮ ಅವಕಾಶ. ಕೌಟುಂಬಿಕ ವಿಷಯಗಳಲ್ಲಿ ಪ್ರಗತಿ. ವ್ಯಾಪಾರದಲ್ಲಿ ಪ್ರಗತಿ ಕಾಣಿಸುತ್ತದೆ. ನಿಮ್ಮ ಆರೋಗ್ಯ ಕೂಡ ಉತ್ತಮವಾಗಿರುತ್ತದೆ. ಮಕ್ಕಳ ಪ್ರಗತಿ ನಿಧಾನಗತಿ ಚಿಂತೆಗೆ ಕಾರಣವಾಗುತ್ತದೆ. ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದವರಿಗೆ ಉತ್ತಮವಾದ ಪ್ರಗತಿ ಕಾಣಲಿದೆ. ಕೆಲ ಕೆಲಸಗಳನ್ನು ಪೂರೈಸಲು ಹೆಚ್ಚಿನ ಶ್ರಮ ಹಾಕಬೇಕಾಗುತ್ತದೆ. ಶುಭದಿನ 22. ದಕ್ಷಿಣಾಮೂರ್ತಿ ಸ್ತೋತ್ರ ಪಠಣ ಮಾಡಿರಿ.




ಉದ್ಯೋಗಸ್ಥರು ನಿಮಗೆ ವಹಿಸಿದ ಕೆಲಸ ಪೂರೈಸಲು ಯಶಸ್ವಿಯಾಗುತ್ತೀರಿ. ನಿಮ್ಮ ಸಿಬ್ಬಂದಿಗೆ ಆತ್ಮಸ್ಥೈರ್ಯ ಹೆಚ್ಚಿಸಲು ಸಫಲರಾಗುತ್ತೀರಿ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ನೀಡಿದ ಸಂದರ್ಶನಗಳು ಯಶಸ್ಸು ಕಾಣುವ ಸಾಧ್ಯತೆಗಳಿವೆ. ಸಂಗಾತಿಯ ಭಾವನೆಗಳಿಗೂ ಗೌರವ ನೀಡಿ. ವಾರದ ಕೊನೆಯಲ್ಲಿ ದೂರದ ಪ್ರದೇಶಗಳಿಗೆ ಭೇಟಿ ನೀಡಬೇಕಾಗುತ್ತದೆ. ಶುಭದಿನ 20. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಹಣಕಾಸು ಹೂಡಿಕೆಯಲ್ಲಿ ಪ್ರಗತಿ ಕಾಣಲಿದ್ದೀರಿ. ತಲೆನೋವು, ಕಣ್ಣಿಗೆ ಸಂಬಂಧಿಸಿದ ತೊಂದರೆ ಹಾಗೂ ಹಲ್ಲು ನೋವು ಕಾಡಬಹುದು. ತಾಳ್ಮೆ ಹಾಗೂ ವಿವೇಚನೆ ಬಹಳ ಮುಖ್ಯವಾಗುತ್ತದೆ. ಸಂಗಾತಿಯಿಂದ ಕೆಲ ಗೊಂದಲ, ಆತಂಕ ಸೃಷ್ಟಿ ಆಗುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಗ್ರಹ ಸ್ಥಿತಿಗಳು ನಿಮಗೆ ಅನುಕೂಲಕರವಾಗಿ ಪರಿಣಮಿಸುತ್ತದೆ. ಶುಭದಿನ 23. ಈಶ್ವರನಿಗೆ ರುದ್ರಾಭಿಷೇಕ ಮಾಡಿಸಿ.




ವಾರದ ಶುರುವಿನಿಂದಲೇ ನಿಮ್ಮ ಅದೃಷ್ಟ ಚೆನ್ನಾಗಿದೆ. ನಿಮ್ಮ ಕೆಲಸಗಳನ್ನು ಪೂರ್ಣಗೊಳಿಸಲು ಹೆಚ್ಚು ಶ್ರಮಿಸುತ್ತಿರಿ. ಕಟ್ಟಡ ವಾಹನಗಳ ನಿರ್ವಹಣೆಯು ನಿರಂತರ ಚಿಂತೆಗೆ ಕಾರಣವಾಗುತ್ತದೆ. ತಂದೆಯ ಜತೆಗೆ ಮನಸ್ತಾಪ ಉದ್ಭವಿಸಬಹುದು. ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಉದ್ಯೋಗ ಜವಾಬ್ದಾರಿಯ ಸದುಪಯೋಗ ಮಾಡಿಕೊಳ್ಳಬೇಕು. ಶುಭದಿನ 22. ಮಾರುತಿ ಗುಡಿಗೆ ಮುಖ ನೋಡಿದ ಎಣ್ಣೆ ನೀಡಿರಿ.




ವ್ಯವಹಾರವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಯತ್ನಿಸುತ್ತೀರಿ. ನಿಮ್ಮ ಶ್ರಮಕ್ಕೆ ಯಶಸ್ಸು ದೊರೆಯುತ್ತದೆ. ನಿಮ್ಮ ಆರೋಗ್ಯ ಚೆನ್ನಾಗಿರುತ್ತದೆ. ವೈವಾಹಿಕ ಜೀವನವು ಸಂತೋಷವಾಗಿ ಇರುತ್ತದೆ. ಮನಸಿಗೆ ಸಂತೋಷ ನೀಡುವಂತಹ ಗೃಹಾಲಂಕಾರ ವಸ್ತುಗಳ ಖರೀದಿಗೆ ಮುಂದಾಗುತ್ತೀರಿ. ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಬಹುದು. ಶುಭದಿನ 19. ಸುಬ್ರಹ್ಮಣ್ಯ ಜಪ ಮಾಡಿರಿ.




ನಿಮ್ಮ ಕೆಲಸಗಳನ್ನು ಇನ್ನಷ್ಟು ಒಪ್ಪ ಓರಣವಾಗಿ ಮಾಡಲು ಶ್ರಮ ಹಾಕುತ್ತೀರಿ. ಸ್ವಚ್ಛತೆ ಕಡೆಗೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಅದನ್ನು ನಿರ್ಲಕ್ಷಿಸಿದಲ್ಲಿ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಭೂಮಿ ಖರೀದಿ ವಿಚಾರದಲ್ಲಿ ಬಿಕ್ಕಟ್ಟುಗಳು ಇದ್ದಲ್ಲಿ ಅವು ನಿವಾರಣೆ ಆಗುತ್ತವೆ. ಇದರಿಂದ ನಿಮಗೆ ಅನುಕೂಲ ಆಗಲಿದೆ. ಶುಭದಿನ 21. ನವದುರ್ಗಾ ಆರಾಧನೆ ಮಾಡಿರಿ.